**ದಿನಾಂಕಃ 06.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಎಂ.ಆರ್.ಪಿ. ವಕೀಲರಿಂದಃ**

1. ಸ.ನಂ.19 ರ 2025-26 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

1 ಮತ್ತು 3 ನೇ ಪ್ರತಿವಾದಿ ಹಾಗೂ ವಕೀಲರನ್ನು ಕೂಗಲಾಗಿ, ಗೈರು ಹಾಜರಿದ್ದು ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟಿ ಸವಾಲುಃ 2(ಎ ಮತ್ತು ಬಿ) ಪ್ರತಿವಾದಿ ಪರ ಶ್ರೀ.ಎಂ.ವಿ.ಡಿ. ವಕೀಲರಿಂದಃ**

ನಾನು ಬಿ.ಎ. ಪದವೀಧರನಾಗಿರುತ್ತೇನೆ. ನಾನು ಈ ದಿನ ಬೆಂಗಳೂರಿನಿಂದ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನಾನು ಸುಮಾರು 20 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ನಾನು ಬೆಂಗಳೂರಿನಲ್ಲಿ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತೇನೆ. ನನ್ನ ತಂದೆ ಕೆ.ಎಸ್.ಶಿವಾನಂದ ರವರು ಪಾರ್ಶ್ವವಾಯು ಕಾಯಿಲೆಯಿಂದ ಬಳಲುತ್ತಿದ್ದರು. ನನ್ನ ತಂದೆ ಪಾರ್ಶ್ವವಾಯು ಆದ 7-8 ವರ್ಷಗಳ ನಂತರ ತೀರಿಕೊಂಡಿರುತ್ತಾರೆ. ನನ್ನ ಅಣ್ಣ ಮಂಜುನಾಥ ಗೌಡ ರವರು ನನ್ನ ತಂದೆ ಆರೈಕೆ ಮಾಡುತ್ತಾ ಬಂದಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಅಣ್ಣ ಮಂಜುನಾಥ ಗೌಡ ತೀರಿಕೊಂಡ ನಂತರ ನನ್ನ ತಂದೆಗೆ ಪಾರ್ಶ್ವವಾಯು ಕಾಯಿಲೆ ಬಂದಿರುತ್ತದೆ. ನನ್ನ ಅಣ್ಣ ಮಂಜುನಾಥ ಗೌಡ ತೀರಿಕೊಂಡು ಈಗ ಸುಮಾರು 13 ವರ್ಷ ಆಯಿತು. ನನ್ನ ತಂದೆ ತೀರಿಕೊಂಡು ಈಗ ಸುಮಾರು 5 ವರ್ಷ ಆಯಿತು. ನನ್ನ ಅಣ್ಣ ತೀರಿಕೊಂಡ ನಂತರ ನನ್ನ ತಂದೆ

ಮನೆಯ ವ್ಯವಹಾರ ಮಾಡುತ್ತಿದ್ದರು ಅಂದರೆ ಸರಿ. ನನ್ನ ತಂದೆ ಹಾಸಿಗೆ ಹಿಡಿದ ನಂತರ 2 ನೇ ಪ್ರತಿವಾದಿ ಸೌಭಾಗ್ಯ ರವರು ದೇಖ್ ರೇಖ್ ಮಾಡುತ್ತಿದ್ದರು ಅಂದರೆ ಸುಳ್ಳು. ಈ ದಾವೆಯಲ್ಲಿ ನನ್ನ ಅಣ್ಣನ ಹೆಂಡತಿಯಾದ ಸೌಭಾಗ್ಯ ರವರನ್ನು ಮಾತ್ರ ಪಕ್ಷಗಾರರನ್ನಾಗಿ ಮಾಡಿ ಅವರ ಮಕ್ಕಳನ್ನು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ ಅಂದರೆ ಸರಿ. ನನ್ನ ಅಣ್ಣನ ಮಕ್ಕಳ ಪೈಕಿ ಗಂಡ ಮಗ ಇಂಜಿನಿಯರಿಂಗ್ ಓದಿ ಮುಗಿದಿರುತ್ತದೆ. ಹೆಣ್ಣು ಮಗಳು ಈಗ ಪಿ.ಯು.ಸಿ. ಓದುತ್ತಿದ್ದಾಳೆ. ಅವರಿಬ್ಬರೂ ನಿಖರವಾಗಿ ಎಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರಿಬ್ಬರ ವಿದ್ಯಾಭ್ಯಾಸಕ್ಕೆ ನಾನು ಯಾವುದೇ ಖರ್ಚು ವೆಚ್ಚಗಳನ್ನು ನೀಡಿರುವುದಿಲ್ಲ. 2012 ರಲ್ಲಿ ನಮ್ಮ ಕುಟುಂಬದ 5 ಎಕರೆ ಜಮೀನನ್ನು ಮಾರಾಟ ಮಾಡಿರುತ್ತೇವೆ. ಸದರಿ ಮಾರಾಟ ಮಾಡಿ ಬಂದ ಹಣವನ್ನು ನನ್ನ ಅಣ್ಣ ಮಂಜುನಾಥ ಗೌಡ ತೆಗೆದುಕೊಂಡಿರುತ್ತಾರೆ. ಆ ಸಂದರ್ಭದಲ್ಲಿ ನನ್ನ ಅಣ್ಣ ಮಂಜುನಾಥ ಗೌಡ ತೀರಿಕೊಂಡಿರುತ್ತಾರೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಹಣವನ್ನು ನನ್ನ ತಂದೆ ತೆಗೆದುಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ಹಣದಲ್ಲಿ 2 ನೇ ಪ್ರತಿವಾದಿ ಹಾಗೂ ಅವರ ಮಕ್ಕಳಿಗೆ ನೀಡಿರುವುದಿಲ್ಲ ಅಂದರೆ ಸುಳ್ಳು. ಅವರಿಗೆ ಹಣ ನೀಡಿದ ಬಗ್ಗೆ ದಾಖಲೆ ಇದೆಯಾ ಅಂದರೆ ಸಾಕ್ಷಿಯು ನೋಡಬೇಕು ಎಂದು ಉತ್ತರಿಸುತ್ತಾರೆ. ನನ್ನ ತಂದೆ ಜೀವಿತಾವಧಿಯಲ್ಲಿ ದಾವಾ ಆಸ್ತಿಯ ಮೇಲೆ ಪ್ರಗತಿ ಕೃಷ್ಣ ಬ್ಯಾಂಕ್ ಹೊಸಬಾಳೆಯಲ್ಲಿ ಸಾಲ ಮಾಡಿರುತ್ತಾರೆ ಅಂದರೆ ಸರಿ. ಆ ಸಾಲವನ್ನು

ನಾನಾಗಲಿ, ಕುಟುಂಬದ ಇತರೆ ಸದಸ್ಯರು ಮರುಪಾವತಿಸಿಲ್ಲ ಅಂದರೆ ಸರಿ. ಅದರ ಅಸಲು ಬಡ್ಡಿ ಎಷ್ಟು ಆಗಿದೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿರುತ್ತೀರಾ ಅಂದರೆ ಇಲ್ಲ. ಸದರಿ ಹಣವನ್ನು ಸಹ ನಾನು ಮತ್ತು ನನ್ನ ತಂದೆ ತೆಗೆದುಕೊಂಡಿರುತ್ತೇವೆ ಅಂದರೆ ಸಾಕ್ಷಿಯು ನನ್ನ ತಂದೆ ಮಾತ್ರ ತೆಗೆದುಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ಸಹೋದರಿ 3 ನೇ ಪ್ರತಿವಾದಿಯವರ ಮದುವೆ ಮಾಡಿ ಈಗ ಸುಮಾರು 20 ವರ್ಷ ಆಯಿತು. ಮದುವೆ ಕಾಲಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ಹಣ ಖರ್ಚು ಆಗಿರಬಹುದು. ಅವರೊಂದಿಗೆ ನನ್ನ ಸಂಬಂಧ ಚೆನ್ನಾಗಿ ಇರುತ್ತದೆ ಅಂದರೆ ಸರಿ. ನನಗಿರುವ ಹಕ್ಕು ಸೌಭಾಗ್ಯ ಮತ್ತು ಅವರ ಮಕ್ಕಳಿಗೂ ಇದೆ ಅಂದರೆ ಸರಿ. ದಾವಾ ಆಸ್ತಿಗಳನ್ನು ಈಗ ಮೂರು ವರ್ಷಗಳ ಹಿಂದೆ ಗ್ರಾಮದಲ್ಲಿ ನಾನು ಮತ್ತು ಸೌಭಾಗ್ಯ ರವರು ಹಿಸ್ಸೆ ಮಾಡಿಕೊಂಡಿರುತ್ತೇವೆ. ಅದರಂತೆ ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಾ ಅನುಭವಿಸಿಕೊಂಡು ಬಂದಿರುತ್ತೇವೆ ಅಂದರೆ ಸರಿ. ದಾವಾ ಆಸ್ತಿ ನಂ.1 2 ನೇ ಪ್ರತಿವಾದಿಯ ಹೆಸರಿಗೆ ಹೋಗಿರುತ್ತದೆ ಅಂದರೆ ಸರಿ. ದಾವಾ ಆಸ್ತಿ ನಂ.2 ರಲ್ಲಿ ನನಗೆ 20 ಗುಂಟೆ ಹಾಗೂ 2 ನೇ ಪ್ರತಿವಾದಿಗೆ ಒಂದು ಕಾಲು ಎಕರೆ ಹೋಗಿರುತ್ತದೆ. ದಾವಾ ಆಸ್ತಿ ನಂ.3 ನಮ್ಮ ತಾಯಿ ಹಿಸ್ಸೆಗೆ ಹೋಗಿರುತ್ತದೆ. ದಾವಾ ಆಸ್ತಿ ನಂ.4 ನನ್ನ ಹಿಸ್ಸೆಗೆ ಮಾತ್ರ ಬಂದಿರುತ್ತದೆ. ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲಿ ಯಾವುದೇ ಹಿಸ್ಸೆ ಆಗಿರುವುದಿಲ್ಲ. ಸ.ನಂ.70 ನಮ್ಮ ಕುಟುಂಬಕ್ಕೆ ಸಂಬಂಧಿಸಿದ್ದಲ್ಲ. ಮೇಲೆ ಹೇಳಿದ ಹಿಸ್ಸೆಯಂತೆ ಈಗ ಸುಮಾರು 3 ವರ್ಷಗಳಿಂದ ಅದರಲ್ಲಿ ಬಂದಂತ ಬೆಳೆಗಳನ್ನು

ಪ್ರತ್ಯೇಕವಾಗಿ ತೆಗೆದುಕೊಳ್ಳುತ್ತಾ ಬಂದಿರುತ್ತೇವೆ. 1 ನೇ ಪ್ರತಿವಾದಿ ನನ್ನ ತಾಯಿ ನನ್ನೊಂದಿಗೆ ವಾಸವಾಗಿರುವುದಿಲ್ಲ. ಅವರಿಗೂ ಸಹ ಒಂದು ಹಿಸ್ಸೆ ನೀಡಿದ್ದು, ಪ್ರತ್ಯೇಕವಾಗಿ ವಾಸವಾಗಿರುತ್ತಾರೆ ಅಂದರೆ ಸರಿ. ಮೇಲೆ ಹೇಳಿದ ಹಿಸ್ಸೆ ಆಗಿದ ವಿಷಯವನ್ನು ದಾವೆಯಲ್ಲಿ ನಮೂದಿಸಿರುವುದಿಲ್ಲ ಅಂದರೆ ಸಾಕ್ಷಿಯು ಹೇಳುವ ಸಂದರ್ಭ ಬಂದಿರುವುದಲ್ಲಿ. ಆದ್ದರಿಂದ ನಮೂದಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ. 3 ನೇ ಪ್ರತಿವಾದಿಯ ಗಂಡನ ಮನೆಯಲ್ಲಿ ಆರ್ಥಿಕವಾಗಿ ಚೆನ್ನಾಗಿ ಇದ್ದಾರೆ ಅಂದರೆ ಸರಿ. ಈ ಹಿಂದೆ 2012 ರಲ್ಲಿ ಕುಟುಂಬದ ಒಂದು ಆಸ್ತಿಯನ್ನು ಮಾರಾಟ ಮಾಡಿ 2 ನೇ ಪ್ರತಿವಾದಿಗೆ ಯಾವುದೇ ಹಿಸ್ಸೆ ಕೊಡದೇ ಇರುವುದರಿಂದ ಗ್ರಾಮದಲ್ಲಿ ಆದ ಹಿಸ್ಸೆಯಲ್ಲಿ ಅವರಿಗೆ ಜಾಸ್ತಿ ಹಿಸ್ಸೆ ನೀಡಿರುತ್ತೀರಿ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಹಣವನ್ನು ಅವರಿಗೂ ಸಹ ನೀಡಿರುತ್ತೇವೆ ಎಂದು ಉತ್ತರಿಸುತ್ತಾರೆ. ನಮ್ಮ ಕುಟುಂಬದಲ್ಲಿ ಹಿಸ್ಸೆ ಆದರೂ ಸಹ ಹಿಸ್ಸೆ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**